## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**-167/2015 **PW**-1

**ದಿಃ 25.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಎಸ ಬಿ ವಕೀಲರಿಂದಃ**

**13.** ಪ್ಲಾಟ ನಂಬರಃ49 ರಲ್ಲಿ ಎಲ್ಲರಿಗೂ ಹಕ್ಕು ಇದೆ ಎನ್ನುತ್ತಾರೆ. ಅಸಲು ದಾವಾ ನಂಃ77/2017 ರಲ್ಲಿ ಸರ್ವೆ ನಂಃ162/1 ಮತ್ತು 162/3 ರ ಸ್ವಾದೀನಕ್ಕೆ ತಾವು ಹರಕತ್ತ ಮಾಡಬಾರದು ಎಂಬ ಮದ್ಯಂತರ ಆದೇಶವು ಇರುತ್ತದೆಂದರೆ ಸರಿಯಲ್ಲ. ಕೆಳಗಿನ ನ್ಯಾಯಾಲಯದಲ್ಲಿ ಆದಂತಹ ಮದ್ಯಂತರ ಆದೇಶದ ಮೇಲೆ ತಾವು ಗೌ. ಜಿಲ್ಲಾ ನ್ಯಾಯಾಲಯದಲ್ಲಿ ಮಿಸ್ ಅಪೀಲನ್ನು ಸಲ್ಲಿಸಿದ್ದೀರಿ ಎಂದರೆ ಸರಿ. ಅದರಲ್ಲಿ ತಮ್ಮಂತೆ ಆದೇಶವಾಗಿರುತ್ತದೆಂದರೆ ಸರಿ. ಆ ಆದೇಶದ ವಿರುದ್ದ ಶಂಕ್ರಪ್ಪನ ಮಕ್ಕಳು ಮತ್ತು ಬಸಪ್ಪ ಗೌ. ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ರಿಟ ಅರ್ಜಿಯಲ್ಲಿ ಮಾನ್ಯ ಜಿಲ್ಲಾ ನ್ಯಾಯಾಲಯವು ಮಾಡಿದ್ದ ಆದೇಶಕ್ಕೆ ಮದ್ಯಂತರ ತಡೆಯಾಜ್ಞೆ ನೀಡಿತ್ತು ಎಂದರೆ ಸರಿ. ಗೌ. ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದಂತಹ ರಿಟ ಅರ್ಜಿಯು ಶಂಕ್ರಪ್ಪನ ಮಕ್ಕಳು ಮತ್ತು ಬಸಪ್ಪನ ಪರವಾಗಿ ಆಗಿದೆ ಎಂದರೆ ಗೊತ್ತಿಲ್ಲ. ನಾನು ನನ್ನ ವಕೀಲರಿಗೆ ಆ ಪ್ರಕರಣದ ಸ್ದಿತಿಗತಿ ಏನಾಗಿದೆ ಎಂಬ ಬಗ್ಗೆ ವಿಚಾರಿಸಿರುವದಿಲ್ಲ. ಸದರಿ ಆದೇಶದ ಪ್ರತಿ ತಮ್ಮ ಬಳಿ ಇರುತ್ತದೆಂದರೆ ಸಾಕ್ಷಿಯು ಇದೆಯೋ ಇಲ್ಲವೋ ಎಂಬುದು ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪ್ರತಿಯನ್ನು ಪಡೆದಿರುತ್ತೀರೋ ಇಲ್ಲವೋ ಎಂದರೆ ಸಾಕ್ಷಿಯು ವಕೀಲರನ್ನು ಕೇಳಿ ಹೇಳಬೇಕು ಎನ್ನುತ್ತಾರೆ. ಸದರಿ ರಿಟ ಅರ್ಜಿಯಲ್ಲಿ ನನ್ನ ಪರವಾಗಿ ವಾದಿಸಲು ವಕೀಲರಾದ ಶ್ರೀ ಮಾನೆ ರವರನ್ನು ನೇಮಕ ಮಾಡಿದ್ದೆ ಎಂದರೆ ಸರಿ. ಗೌ. ಉಚ್ಚ ನ್ಯಾಯಾಲಯವು ರಿಟ ಅರ್ಜಿಯ ಆದೇಶದಲ್ಲಿ ಅಸಲು ದಾವಾ ಸಂಖ್ಯೆಃ77/2017 ನಿಖಾಲಿಯಾಗುವವರೆಗೂ ಸರ್ವೆ ನಂಃ162/1 ಮತ್ತು 162/3 ರ ಪ್ರತಿವಾದಿ ನಂಃ2 ಮತ್ತು 3 ರವರ ಸ್ವಾದೀನಕ್ಕೆ ತಾವು ಅಡ್ಡಿಪಡಿಸಬಾರದೆಂಬ ಆದೇಶವನ್ನು ಮಾಡಲಾಗಿರುತ್ತದೆಂದರೆ ಸಾಕ್ಷಿಯು ನಾನೇ ಕಬ್ಜಾದಲ್ಲಿ ಇರುತ್ತೇನೆ ಎನ್ನುತ್ತಾರೆ. ಗೌ. ಉಚ್ಚ ನ್ಯಾಯಾಲಯದ ಆದೇಶದ ವಿರುದ್ದ ತಾವು ಯಾವದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂಃ162/1 ಮತ್ತು 162/3 ಕ್ಕೆ ಸಂಬಂದಿಸಿದಂತೆ ತಮ್ಮ ಬಳಿ ಸ್ವಾದೀನ ಇರುವ ಬಗ್ಗೆ ಕಾಗದ ಪತ್ರಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಮೊದಲೇ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಯಾವದು ಕಾಗದ ಪತ್ರ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಖರೀದಿ

ಕಾಗದ ಪತ್ರ , ಉತಾರ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಿಪಿ 72 ರಲ್ಲಿ ಯಾರ ಹೆಸರಿದೆ ಎಂದು ಕೇಳಲಾಗಿ ಸಾಕ್ಷಿಯು ದಾಖಲೆ ನೋಡಿ ಅದು ಮೋಸ ಮಾಡಿರುವ ದಾಖಲೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅದರಲ್ಲಿ ಶಂಕ್ರಪ್ಪ ಮತ್ತು ಬಸಪ್ಪನ ಹೆಸರು ಇದೆ ಎನ್ನುತ್ತಾರೆ. ಅದರಲ್ಲಿ ಮೋಸ ಮಾಡಿ ಬರೆದಿರುತ್ತಾರೆ ಎಂಬ ಬಗ್ಗೆ ಉಲ್ಲೇಖ ಇದೆಯಾ ಎಂದರೆ ಸಾಕ್ಷಿಯು ಆ ರೀತಿ ಇರುವದಿಲ್ಲ ಎನ್ನುತ್ತಾರೆ. ನಿಪಿ 81 ರಲ್ಲಿ ಸಹ ಬಸಪ್ಪ ಮತ್ತು ಶಂಕ್ರಪ್ಪನ ಹೆಸರು ಇರುತ್ತವೆ. ಸಾಕ್ಷಿ ಮುಂದುವರೆದು ಅದರಲ್ಲಿ ಮೋಸ ಮಾಡಿ ಬರೆಯುತ್ತಾರಾ ಎಂದು ಪ್ರಶ್ನಿಸುತ್ತಾರೆ. 2009 ರಿಂದ ಸರ್ವೆ ನಂಃ162/1 ಮತ್ತು 162/3 ರ ಉತಾರಗಳಲ್ಲಿ ಶಂಕ್ರಪ್ಪ ಮತ್ತು ಬಸಪ್ಪನ ಹೆಸರು ಮಾಲೀಕ ಮತ್ತು ಕಬ್ಜಾದಾರರ ಕಾಲಂನಲ್ಲಿ ದಾಖಲಾಗಿದೆ ಎಂದರೆ ಮೋಸ ಮಾಡಿ ದಾಖಲು ಮಾಡಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. 2009 ರಿಂದ 2017 ರವರೆಗೂ ತಾವು ಹಕ್ಕು ಬಿಟ್ಟ ಪತ್ರವನ್ನು ಎಲ್ಲಿಯೂ ಸಹ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿಯು ನನಗೆ ದಾವಾ ಮಾಡಲು ಬಂದಾಗ ಅದರ ಹಕೀಕತ್ತು ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. 2015 ರಲ್ಲಿ ಮಾಡಿದ ದಾವೆಯಲ್ಲಿ ತಾವು ಹಕ್ಕು ಬಿಟ್ಟ ಪತ್ರದ ಬಗ್ಗೆ ಯಾವದಾದರೂ ಮಾಗಣಿಯನ್ನು ಕೇಳಿದ್ದೀರಾ ಎಂದರೆ ಸಾಕ್ಷಿಯು ನ್ಯಾಯಾಲಯಕ್ಕೆ ದಾವಾ ಮಾಡಿದ್ದು ಕೊಡುವದು ಬಿಡುವದು ಅವರಿಗೆ ಬಿಟ್ಟದ್ದು ಎಂದು ನುಡಿಯುತ್ತಾರೆ. 2009 ರಿಂದ ಶಂಕ್ರಪ್ಪ ಮತ್ತು ಬಸಪ್ಪನ ಹೆಸರು ಸರ್ವೆ ನಂಃ162/1 ಮತ್ತು 162/3 ರಲ್ಲಿ ನಿರಂತರವಾಗಿ ದಾಖಲಾಗಿದ್ದರೂ ತಾವು ಅವರಿಗೆ ತೊಂದರೆ ಕೊಡಲು ನಿರಂತರವಾಗಿ ತೊಂದರೆ ಕೊಡುತ್ತಾ ಬಂದಿರುತ್ತೀರಿ ಎಂದರೆ ಸರಿಯಲ್ಲ. ಎರಡೂ ಸರ್ವೆ ನಂಬರಗಳು ಇಲ್ಲಿಯವರೆಗೂ ಅವರ ಸ್ವಾದೀನದಲ್ಲಿವೆ ಎಂದರೆ ಸಾಕ್ಷಿಯು ಮೋಸ ಮಾಡಿಕೊಂಡ ಕಾರಣ ಅವರ ಕಬ್ಜಾದಲ್ಲಿ ಇರುತ್ತವೆ ಎನ್ನುತ್ತಾರೆ.

**(ನ್ಯಾಯಾಲಯದ ಬೆಳಗಿನ ಕಾಲಾವದಿ ಮುಗಿದಿದ್ದರಿಂದ ಮದ್ಯಾಹ್ನದ ಕಾಲಾವಾದಿಗೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.

**OS**-167/2015 **PW**-1

**ದಿಃ 25.10.2024 ರಂದು ಸಾಕ್ಷಿಯನ್ನು ಮದ್ಯಾಹ್ನದ ಕಾಲಾವದಿಗೆ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಎಸ ಬಿ ವಕೀಲರಿಂದಃ**

**14.** ಬ್ಲಾಕ ನಂಬರ 75 ಇದು ಬಸಪ್ಪ ಕಟ್ಟಿ ರವರ ಹೆಸರಿನಲ್ಲಿರುತ್ತದೆ. ಬಸಪ್ಪ ಕಟ್ಟಿ ರವರಿಗೆ ಯಾವ ರೀತಿ ಬಂತು ಎಂಬ ಬಗ್ಗೆ ಡ ಉತಾರ ಹಾಜರುಪಡಿಸಿರುತ್ತೇನೆ. ನಿಪಿ 29 ಕ್ರಯದ ಕರಾರು ಪತ್ರ ತಪ್ಪು ಎಂದು ತೀರ್ಮಾನಿಸಬೇಕೆಂದು ಕೇಳಿ ಯಾವದೇ ಮಾಗಣಿಯನ್ನು ಈ ದಾವೆಯಲ್ಲಿ ಮಾಡಿರುವದಿಲ್ಲ. ಸರ್ವೆ ನಂಃ162/1 ಮತ್ತು 162/3 ಡ ನಂಬರಗಳಿಗೆ ಸಂಬಂದಿಸಿದಂತೆ ಯಾವದೇ ಮೇಲ್ಮನವಿಯನ್ನು ಸಲ್ಲಿಸಿರುವದಿಲ್ಲ. ಬ್ಲಾಕ ನಂಬರಃ75 ರ ಡ ಉತಾರವನ್ನು ಪ್ರಶ್ನಿಸಿ ಎಲ್ಲಿಯೂ ಮೇಲ್ಮನವಿಯನ್ನು ಸಲ್ಲಿಸಿಲ್ಲ ಹಾಗೂ ಪ್ರಶ್ನಿಸುವ ಸಂದರ್ಬ ಬಂದಿರುವದಿಲ್ಲ. ನಿಪಿ 9 ನ್ನು ಯಾವ ಕಾರಣಕ್ಕಾಗಿ ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಅಜ್ಜನ ಹೆಸರು ಎಲ್ಲರ ಹೆಸರು ಕೂಡಿರುವದರಿಂದ ಪಿತ್ರಾರ್ಜಿತ ಆಸ್ತಿಯಾಗಿರುವ ಕಾರಣ ಹಾಕಿರುತ್ತೇನೆಂದು ನುಡಿಯುತ್ತಾರೆ. ಬ್ಲಾಕ ನಂಃ 75 ಅಂದರೆ ನಿಪಿ 9 ಯಾರ ಹೆಸರಿನಲ್ಲಿದೆ ಎಂದರೆ ಸಾಕ್ಷಿಯು ದಾಖಲೆ ನೋಡಿ ಬಸಪ್ಪನ ಹೆಸರಿನಲ್ಲಿರುತ್ತದೆ ಎನ್ನುತ್ತಾರೆ. ಈ ದಾಖಲೆಗೂ ಪ್ರಕರಣಕ್ಕೂ ಯಾವದೇ ರೀತಿಯಾಗಿ ಸಂಬಂದಿಸಿರುವದಿಲ್ಲ ಅದು ತುಂಡು ಬೂಮಿಗಳ ಕ್ರೋಡೀಕರಣಕ್ಕಾಗಿ ನೀಡಿದ ದಾಖಲೆ ಎಂದರೆ ಸರಿಯಲ್ಲ. ನಿಪಿ 11 ಬಸಪ್ಪನ ಹೆಸರಿನಲ್ಲಿರುವ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ. ಶಿರಹಟ್ಟಿ ವಕೀಲರ ಮುಖಾಂತರ ಪದ್ಮಜಾರಾಣಿ ರವರಿಗೆ ನೋಟೀಸನ್ನು ಯಾವ ಕಾರಣಕ್ಕಾಗಿ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು 2 ಎಕರೆ ಖರೀದಿಗೆ ತೆಗೆದುಕೊಂಡ ವಿಚಾರವಾಗಿ ತಕರಾರು ಇದೆ ಎಂದು ಹೇಳಿ ಅವರಿಗೆ ನೋಟೀಸನ್ನು ಕೊಡಿಸಿದ್ದೆ. ಖರೀದಿ ಪತ್ರವನ್ನು ನಾನು ಹಾಜರುಪಡಿಸಿರುವದಿಲ್ಲ. ಅದು 2ನೇ ಪ್ರತಿವಾದಿಯ ಬಳಿ ಇರುತ್ತದೆ. ತಾವು ಸದರಿ ಖರೀದಿ ಪತ್ರದ ದೃಡೀಕೃತ ಪ್ರತಿಯನ್ನು ಹಾಜರುಪಡಿಸಲು ಪ್ರಯತ್ನ ಪಟ್ಟಿರುತ್ತೀರಾ ಎಂದರೆ ಸಾಕ್ಷಿಯು ಪ್ರಯತ್ನಿಪಟ್ಟಿರುತ್ತೇನೆ ಆದರೆ ನನ್ನನ್ನು ಸದರಿ ಕಚೇರಿಗೆ ಬರದಂತೆ ಏರ್ಪಾಡನ್ನು ಮಾಡಿರುತ್ತಾರೆಂದು ನುಡಿಯುತ್ತಾರೆ. ನನ್ನ ವಕೀಲರ ಮುಖಾಂತರ ಉಪನೋಂದಣಾದಿಕಾರಿಗಳಿಗೆ ನೋಟೀಸನ್ನು ನೀಡಿ ಸದರಿ ದಾಖಲೆಯ ದೃಡೀಕೃತ ಪ್ರತಿಯನ್ನು ಪಡೆಯುವ ಪ್ರಯತ್ನ ಮಾಡಿರಲಿಲ್ಲ. ತಾವು ಖರೀದಿ ತೆಗೆದುಕೊಂಡಂತಹ

ವ್ಯಕ್ತಿಯನ್ನು ಪಕ್ಷಗಾರರಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರವನ್ನು ಪ್ರಶ್ನಿಸಿಲ್ಲ ಎಂದರೆ ನೆನಪಿಲ್ಲ. ಸದರಿ ಖರೀದಿ ಪತ್ರದ ವಿವರಗಳನ್ನು ಅಸಲರ್ಜಿಯಲ್ಲಿ ಬರೆಸಿರುತ್ತೀರಿ ಎಂದರೆ ಇಲ್ಲ.

15. ನಿಪಿ 30 ರಲ್ಲಿರುವ ಪ್ರಕರಣ ಏನಾಯಿತು ಎಂದರೆ ಸಾಕ್ಷಿಯು ಬಂದಾಗಿರುತ್ತದೆ ಎನ್ನುತ್ತಾರೆ. ಈ ರೀತಿ ಬಂದ ಆಗಿದೆ ಎಂಬ ಬಗ್ಗೆ ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಯಾವದೇ ದಾಖಲೆ ಕೊಟ್ಟಿಲ್ಲ ಎನ್ನುತ್ತಾರೆ. ಖುಲ್ಲಾ ಜಾಗಾ ಮತ್ತು ಮನೆ ಅಂದರೆ ಅನುಸೂಚಿ - ಕ ಆಸ್ತಿಗೆ ಸಂಬಂದಿಸಿದಂತೆ ಅದು ಯಾರ ಹೆಸರಿನಲ್ಲಿವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ಅದು ಬಸಪ್ಪ ಖರೀದಿ ಹಿಡಿದ ಕಾರಣ ಅದು ಅವರ ಬಳಿ ಇರುತ್ತದೆ. ಕ್ರಿಮಿನಲ್ಲ ಕೇಸು ಅಂದರೆ ನಿಪಿ 143 ರಲ್ಲಿರುವ ಪ್ರಕರಣವನ್ನು ಯಾರ ಮೇಲೆ ಹಾಕಲಾಗಿದೆ ಎಂಬುದು ಗೊತ್ತಿಲ್ಲ. ಯಾವ ಕಾರಣಕ್ಕಾಗಿ ಹಾಕಲಾಗಿದೆ ಎಂದೂ ಸಹ ತುಂಬಾ ಕೇಸುಗಳಾದ ಕಾರಣ ಗೊತ್ತಿಲ್ಲ. ತಮ್ಮ ಮೇಲೆಯೂ ಸಹ ಸಾಕಷ್ಟು ಕ್ರಿಮಿನಲ್ಲ ಪ್ರಕರಣಗಳಿವೆ ಎಂದರೆ ಸರಿ. 7 ನೇ ಪ್ರತಿವಾದಿಗೆ ಕೆ ಐ ಎ ಡಿ ಬಿ ರವರು ಖರೀದಿಗೆ ನೀಡಿದ ವ್ಯವಹಾರದಲ್ಲಿ ತಾವು ಏನಾದರೂ ಭಾಗವಹಿಸಿದ್ದೀರಾ ಎಂದರೆ ಸಾಕ್ಷಿಯು ನಾನು ಬಾಗವಹಿಸಿದ್ದು ಎಲ್ಲರ ಆಸ್ತಿ ಎನ್ನುತ್ತಾರೆ. 2005 ರಲ್ಲಿ ಖರೀದಿ ವ್ಯವಹಾರ ಆಗಿದ್ದು 78 ಸಾವಿರ ರೂ ಗಳಿಗೆ ಖರೀದಿ ವ್ಯವಹಾರ ಆಗಿರುತ್ತದೆ. ಖರೀದಿ ವ್ಯವಹಾರದಲ್ಲಿ ಚೆಕ್ಕನ್ನು 7 ನೇ ಪ್ರತಿವಾದಿಯಿಂದ ಪಡೆದು ಕೆ ಎ ಐ ಡಿ ಬಿ ಯವರು 7 ನೇ ಪ್ರತಿವಾದಿ ಹೆಸರಿಗೆ ಖರೀದಿ ಪತ್ರ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿಯು ನನ್ನ ಮಾವನಿಗೆ ಗೊತ್ತು ಎನ್ನುತ್ತಾರೆ. 78 ಸಾವಿರ ರೂಗಳು ನಾನು ಹೇಳುವ ಒಟ್ಟು ಕುಟುಂಬದಲ್ಲಿತ್ತು ಎಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ. 7 ನೇ ಪ್ರತಿವಾದಿಯು ಕೆ ಐ ಎ ಡಿ ಬಿ ರವರು ಖರೀದಿಗೆ ನೀಡಿದ ಆಸ್ತಿಯಲ್ಲಿ ಅಂಗಡಿ ಕಟ್ಟಿಕೊಂಡು ವ್ಯವಹಾರ ಮಾಡುತ್ತಿದ್ದ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಸರಿಯಲ್ಲ ನಾವೂ ಸಹ ಅಂಗಡಿ ಕಟ್ಟಲು ಸಹಕರಿಸಿರುತ್ತೇವೆ ಎನ್ನುತ್ತಾರೆ. ಅದೇ ರೀತಿಯಾಗಿ ತಾವು ಹೇಳುವ ಒಟ್ಟು ಕುಟುಂಬದಲ್ಲಿ ಅಂಗಡಿ ಕಟ್ಟಲು ಹಣ ಇದ್ದ ಬಗ್ಗೇ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. 7 ನೇ ಪ್ರತಿವಾದಿಯು ಖರೀದಿಸಿದ ಆಸ್ತಿಯನ್ನು ಆತನ ಹೆಂಡತಿಗೆ ಬಕ್ಷೀಸ್ ಮಾಡಿರುತ್ತಾನೆಂದರೆ ಸಾಕ್ಷಿಯು ನಾನು ದಾವೆ ಮಾಡಿದ ನಂತರ ಮಾಡಿರುತ್ತಾರೆಂದು ನುಡಿಯುತ್ತಾರೆ.

**ಈ ಸಂದರ್ಬದಲ್ಲಿ ವಕೀಲರು ಕೆಲವೊಂದು ದಾಖಲೆಗಳ ಮೇಲೆ ಹೆಚ್ಚಿನ ಪಾಟೀ ಸವಾಲಗೆ ಸಾಕ್ಷಿಯನ್ನು ಒಳಪಡಿಸಬೇಕಾಗಿದ್ದು ಸದರಿ ದಾಖಲೆಗಳು ಈ ಸಂದರ್ಬದಲ್ಲಿ ಲಬ್ಯವಿಲ್ಲ ಎಂದು ಕಾಲಾವಕಾಶ ಕೋರಿದ್ದು ಕೇಸನ ವಯೋಮಿತಿಯನ್ನು ಪರಿಗಣಿಸಿ ಕಾಲಾವಕಾಶವನ್ನು ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**